ಓ.ಎಸ್. ನಂ.    50/2012
ಡಿ ಡಬ್ಲ್ಯೂ  -1

**<u>ಸಾಕ್ಷಿಯನ್ನು  ದಿನಾಂಕ: 16-07-2025 ರಂದು ಕರೆಸಿ  ಪ್ರಮಾಣೀಕರಿಸಲಾಯಿತು.</u>**

**<u>ವಾಟೀಸವಾಲುಃ 1 ಮತ್ತು  7 ನೇ ಪ್ರತಿವಾದಿ ಪರ ಶ್ರೀ ಡಿ ಜಿ ಟಿ ವಕೀಲರಿಂದ</u>**

ನನ್ನ ಮುತ್ತಾತ ಟಿ ಹನುಮಂತಯ್ಯನವರಿಗೆ ಚಿಕ್ಕಯ್ಯಣ್ಣ, ಟಿ.ಹೆಚ್. ಕಾಮಣ್ಣ, ಟಿ.ಹೆಚ್. ಹನಮಂತರಾಯಪ್ಪ , ಟಿ.ಹೆಚ್. ಅಂಜಿನಪ್ಪ, ಮತ್ತು ಟಿ. ಹೆಚ್. ದೊಡ್ಡಣ್ಣ ಎಂಬ  5 ಜನ ಮಕ್ಕಳು. ನನ್ನ ಮುತ್ತಾತ ಟಿ. ಹನಮಂತಯ್ಯನವರಿಗೆ ಕಾಮಕ್ಕ, ದೊಡ್ಡಕ್ಕ, ಲಕ್ಕಮ್ಮ ಎಂಬ  3 ಜನ ಹೆಣ್ಣು ಮಕ್ಕಳು ಎಂದರೆ ಸರಿ. ನಮ್ಮ ಒಟ್ಟು ಕುಟುಂಬದ ಆಸ್ತಿ ಟಿ. ಹನುಮಂತಯ್ಯನವರ 8 ಜನ ಮಕ್ಕಳಿಗೂ ಸಂಬಂಧಿಸಿದಂತಹ ಆಸ್ತಿ ಆಗಿರುತ್ತದೆ. ಸದರಿ ಹನಮಂತಯ್ಯನ ಎಲ್ಲಾ ಮಕ್ಕಳ ವಂಶಸ್ಥರು ಈ ದಾವೆಯಲ್ಲಿ ಪಕ್ಷಗಾರರಾಗಿರುತ್ತಾರೆ.  ನನ್ನ ತಾತ ಟಿ.ಹೆಚ್. ಚಿಕ್ಕ ಅಯ್ಯನ ಮಕ್ಕಳಾದ  ಜಯಮ್ಮ, ಟಿ.ಸಿ. ಹನಮಂತಪ್ಪ, ಚಿಕ್ಕತಾಯಮ್ಮ , ಲಕ್ಷ್ಮಮ್ಮ, ಸರೋಜಮ್ಮ, ಟಿ.ಸಿ. ರಾಮಕೃಷ್ಣಪ್ಪ ಈ ದಾವೆಯಲ್ಲಿ ಪಕ್ಷಗಾರರಾಗಿರುತ್ತಾರೆ. ಟಿ.ಹೆಚ್. ಕಾಮಣ್ಣ ನ ಮಕ್ಕಳಾದ ಟಿ.ಕೆ. ಹನುಮಂತಪ್ಪ, ರಾಜಮ್ಮ, ದೊಡ್ಡಮ್ಮಯ್ಯ, ಟಿ.ಕೆ. ರಾಜಣ್ಣ ಮತ್ತು ಸಿದ್ದಗಂಗಮ್ಮನರವರು ಈ ದಾವೆಯಲ್ಲಿ ಪಕ್ಷಗಾರರಾಗಿರುತ್ತಾರೆ. ಟಿ.ಹೆಚ್. ಆಂಜಿನಪ್ಪ ರವರ ಮಕ್ಕಳಾದ ಟಿ.ಎ ಬೀಮರಾಜು, ನಾರಾಯಣಪ್ಪ, ಟಿ.ಎ ಪುಟ್ಟರಾಜಮ್ಮ, ಟಿ. ಎ ನಾಗರಾಜು ರವರು ಈ ದಾವೆಯಲ್ಲಿ ಪಕ್ಷಗಾರರಾಗಿರುತ್ತಾರೆ. ಟಿ.ಹೆಚ್. ದೊಡ್ಡಣ್ಣ ರವರು ಮೃತ ಪಟ್ಟಿದ್ದು ಅವರ ಹೆಂಡತಿ ಪುಟ್ಟರಂಗಮ್ಮರವರು ಜೀವಂತವಾಗಿರುತ್ತಾರೆಂದರೆ ಸರಿ. ಸದರಿ ಪುಟ್ಟರಂಗಮ್ಮರವರು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಅವರ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇನೆ.

1976 ನೇ ಸಾಲಿನಲ್ಲಿ ದಾವಾ ಆಸ್ತಿ ಖಾತೆಯು ನನ್ನ ತಾತ ನಾದ ಚಿಕ್ಕ ಅಯ್ಯನ ಹೆಸರಿನಲ್ಲಿ ಬರುತ್ತಿತ್ತು.  ನನ್ನ ತಾತನಾದ ಚಿಕ್ಕ ಅಯ್ಯಣ ನವರು 18 ವರ್ಷ ವಯಸ್ಸಿನಲ್ಲಿರುವಾಗ ನನ್ನ ಮುತ್ತಾತ ಹನುಮಂತಯ್ಯ ನವರು ತೀರಿಕೊಂಡಿದ್ದು ಅಂದಿನಿಂದ ದಾವಾ ಆಸ್ತಿಯ ಖಾತೆಯು ನನ್ನ ತಾತನಾದ  ಚಿಕ್ಕ ಅಯ್ಯನ ಹೆಸರಿಗೆ  ಬಂದಿರುತ್ತದೆ. ಸರ್ವೆ ನಂ. 121 ವಿಸ್ತೀರ್ಣ 2 ಎಕರೆ ಚಿಲ್ಲರೆ ಇರುತ್ತದೆ. ದಾವಾ ಆಸ್ತಿಯ ಪಹಣಿ ಪತ್ರಿಕೆಯನ್ನು ನನಗೆ ಬುದ್ದಿ ಬಂದಾಗಿನಿಂದಲೂ ನೋಡುತ್ತಿರುತ್ತೇನೆ. ಸರ್ವೆ ನಂ, 121 ಮೊದಲು 2 ಎಕರೆ 2 ಗುಂಟೆ ವಿಸ್ತೀರ್ಣ ಇತ್ತು ಎಂದರೆ ಸರಿ. ಸದರಿ ಸರ್ವೆ ನಂ. ಪೋಡಿ ಆಗಿರುತ್ತದೆ ಇಲ್ಲವೊ ನನಗೆ ಗೊತ್ತಿಲ್ಲ.  ನಾನು ಗಟ್ಟಿ ತಿಮ್ಮನಹಳ್ಳಿಯಲ್ಲಿ ಜನಿಸಿದ್ದು, ಅಲ್ಲಿಯೇ ವಿದ್ಯಾಭ್ಯಾಸ ಮಾಡಿದ್ದು ಉದ್ಯೋಗಕ್ಕೆ ಸೇರಿಕೊಂಡ ನಂತರ  1995 ನೇ ಸಾಲಿನ ನಂತರ ನಾನು ತೋವಿನಕೆರೆಯಲ್ಲಿ ವಾಸ ಮಾಡುತ್ತಿರುತ್ತೇನೆ. 1995 ನೇ ಸಾಲಿನಲ್ಲಿ  ದಾವಾ ಆಸ್ತಿಯಲ್ಲಿ ಶಾಲೆಯು 1ನೇ ಪ್ರತಿವಾದಿ ಹೆಸರಿನಲ್ಲಿ ನಡೆಯುತ್ತಿತ್ತು ಎಂದರೆ ನನ್ನ ತಾತನಾದ ಟಿ.ಹೆಚ್. ಹನಮಂತರಾಯಪ್ಪನವರ ಹೆಸರಿನಲ್ಲಿ ನಡೆಯುತ್ತಿತ್ತು. ಸದರಿ ಟಿ.ಹೆಚ್. ಹನುಮಂತರಾಯಪ್ಪನವರು 7ನೇ ಪ್ರತಿವಾದಿಯ ತಂದೆ ಎಂದರೆ ಸದರಿ ಹನಮಂತರಾಯಪ್ಪನವರು ನನ್ನ ತಾತ. ದಾವಾ ಶೀರ್ಷಿಕೆ ಯಲ್ಲಿ 7ನೇ  ಪ್ರತಿವಾದಿ  ರವರ ತಂದೆ ಹೆಸರು ಟಿ. ಹೆಚ್. ಹನುಮಂತರಾಯಪ್ಪ ಎಂದು ಕಾಣಿಸಿರುತ್ತೇನೆಂದರೆ ಸರಿ.

1995 ನೇ ಸಾಲಿನಲ್ಲಿ ನನಗೆ ಸುಮಾರು 25 ವರ್ಷ ವಯಸ್ಸಾಗಿತ್ತು. 1976 ನೇ ಸಾಲಿನಲ್ಲಿ ಎಷ್ಟು ವಯಸ್ಸಾಗಿತ್ತು ಎಂದು ಲೆಕ್ಕಾ ಮಾಡಿ ಹೇಳಬೇಕಾಗುತ್ತದೆ. ಟಿ.ಹೆಚ್. ಕಾಮಣ್ಣ 5 ಜನ ಮಕ್ಕಳು ವಿಭಾಗ ವಾಗಿರುವುದಿಲ್ಲ

ಇಂದಿಗೂ ಎಲ್ಲಾರೂ ಒಟ್ಟು ಕುಟುಂಬದಲ್ಲಿರುತ್ತಾರೆ. ದಿಃ 13-07- 1976 ರಂದು ನನ್ನ ತಾತನಾದ 1ನೇ ಪ್ರತಿವಾದಿಯ ಹೆಸರಿಗೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ದಾನ ಪತ್ರ ಬರೆದಿರುವ ಬಗ್ಗೆ ನನಗೆ 2008-09 ನೇ ಸಾಲಿನಲ್ಲಿ ಗೊತ್ತಾಗಿರುತ್ತದೆ. 1963 ನೇ ಸಾಲಿನಲ್ಲಿ 1ನೇ ಪ್ರತಿವಾದಿಯ ಹೆಸರಿನಲ್ಲಿ ಶಾಲೆ ಮಂಜೂರಾಗಿರುತ್ತದೆಂದರೆ ಸರಿ. ಆ ಸಮಯದಲ್ಲಿ ತೋವಿನಕೆರೆ ಗ್ರಾಮದಲ್ಲಿ ಬಾಡಿಗೆ ಕಟ್ಟಡದಲ್ಲಿ ಶಾಲೆ ನಡೆಯುತ್ತಿತ್ತು ಎಂದರೆ ಸರಿ. 1ನೇ ಪ್ರತಿವಾದಿ ಹೆಸರಿಗೆ ದಾನ ಪತ್ರ ಆದ ನಂತರ ದಾವಾ ಆಸ್ತಿಯಲ್ಲಿ ಶಾಲೆ ನಡೆಯುತ್ತಿ ತ್ತು ಎಂದರೆ ಸರಿಯಲ್ಲ. ಪಣಗಾರು ರಾಜಣ್ಣ ಕಟ್ಟಡದಲ್ಲಿ ಮೊದಲು ಶಾಲೆ ನಡೆಯುತ್ತಿತ್ತು. 1978 ನೇ ಸಾಲಿನಲ್ಲಿ ನಾನು ದಾವಾ ಆಸ್ತಿಯಲ್ಲಿ ಇರುವ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿರುವ ಕಾರಣ ಅಂದಿನಿಂದ ದಾವಾ ಆಸ್ತಿಯಲ್ಲಿ ಶಾಲೆ ನಡೆಯುತ್ತಿರುವ ಬಗ್ಗೆ ನನಗೆ ಗೊತ್ತು. ಸದರಿ ಶಾಲೆಯಲ್ಲಿ ಪ್ರತಿವಾದಿ 2(a) ರಿಂದ (c) , ಪ್ರತಿವಾದಿ 10, 11 ರವರು ವಿದ್ಯಾಭ್ಯಾಸ ಮಾಡಿರುತ್ತಾರೆಂದರೆ ಸರಿಯಲ್ಲ. ನಾನು ವಿದ್ಯಾಭ್ಯಾಸ ಮಾಡಿರುವ ಶಾಲೆಯಲ್ಲಿ ಸುಮಾರು 25-30 ಶಾಲಾ ಕೊಠಡಿಗಳು ಇರುತ್ತವೆಂದರೆ ಸರಿಯಲ್ಲ, 8-10 ಕೊಠಡಿಗಳು ಇರಬಹುದು. 1982 ನೇ ಸಾಲಿನಿಂದ ದಾವಾ ಆಸ್ತಿಯಲ್ಲಿ PU ಕಾಲೇಜು 1ನೇ ಪ್ರತಿವಾದಿಯ ಹೆಸರಿನಲ್ಲಿ ಪ್ರಾರಂಬವಾಗಿರುತ್ತದೆಂದರೆ ಸರಿ. ಸದರಿ ಕಾಲೇಜಿನ ಕಾಂಪೌಂಡನಲ್ಲಿ ITI, JOC, Decree collage, ಮಂಜೂರಾಗಿ ನಡೆಯುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ ಹೆಸರಿನಲ್ಲಿರುವ ಶಾಲೆಗೆ ಟಿ.ಹೆಚ್. ಹನಮಂತರಾಯಪ್ಪನವರು ಜೀವಿತಾವಧಿಯಲ್ಲಿ ಸೆಕ್ರೆಟಿ ಆಗಿದ್ದರು ಎಂದರೆ ಸರಿ. 1ನೇ ಪ್ರತಿವಾದಿ ಶಾಲೆಗೆ ಒಬ್ಬ ಅಧ್ಯಕ್ಷರು, ಸೆಕ್ರೆಟಿ, ಮತ್ತು 9 ಜನ ಸದಸ್ಯವುಳ್ಳ ಕಮಿಟಿ ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕಮೀಟಿ ಸದಸ್ಯರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. 1ನೇ ಪ್ರತಿವಾದಿ ಹೆಸರಿಗೆ ಆಗಿರುವ ದಾನ ಪತ್ರವನ್ನು ಅವರ ಹೆಸರಿಗೆ ಬರೆದುಕೊಡಲು ಬರುವುದಿಲ್ಲ ಸದರಿ ಆಸ್ತಿ ಒಟ್ಟು ಕುಟುಂಬದ ಆಸ್ತಿ ಎಂದು ನಾನು 1ನೇ ಪ್ರತಿವಾದಿಯನ್ನು ಬಾಯಿ ಮಾತಿನ ಮೂಲಕ ಕೇಳಿರುತ್ತೇನೆ. 1ನೇ ಪ್ರತಿವಾದಿ ಹೆಸರಿಗೆ ಆಗಿರುವ ದಾನ ಪತ್ರವನ್ನು ಪ್ರಶ್ನಿಸಿ ನಾನು ಈ ದಾವೆಯನ್ನು ಬಿಟ್ಟು ಬೇರೆ ಸಲ್ಲಿಸಿರುವುದಿಲ್ಲ. ದಾನ ಪತ್ರದ ಆಧಾರದ ಮೇಲೆ 1ನೇ ಪ್ರತಿವಾದಿ ಹೆಸರಿಗೆ ಎಂ ಆರ್. 2/1976-77 ರಂತೆ ಖಾತೆ ಆಗಿರುತ್ತದೆಂದರೆ ಸರಿ. ಸದರಿ ಎಂ ಆರ್. ನ್ನು ಪ್ರಶ್ನಿಸಿ ರೆವಿನ್ಯೂ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ, ಈ ದಾವೆಯನ್ನು ಸಲ್ಲಿಸಿರುತ್ತೇನೆ.

ದಾವಾ ಸರ್ವೆ ನಂ. 121/1, ವಿಸ್ತೀರ್ಣ 26 ಗುಂಟೆ ಟಿ.ಎ ಬೀಮರಾಜು, ಹನಮಂತಪ್ಪ, ರಾಜಣ್ಣ, ರವರ ಹೆಸರಿನಲ್ಲಿ ಜಂಟಿಯಾಗಿ ಬರುತ್ತಿರುತ್ತದೆಂದರೆ, ಹನುಮಂತಪ್ಪ ಎಂಬುವುದು ಸರಿಯಲ್ಲ ಅದು ಹನುಮಂತಯ್ಯ ಆಗಿರುತ್ತದೆ. ನನ್ನ ತಾತ ಚಿಕ್ಕ ಅಯ್ಯಣನಿಗೆ ಹನುಮಂತಪ್ಪ ಎಂಬ ಮಗ ಇದ್ದ ಎಂದರೆ ಸರಿ. ಬೀಮರಾಜು ರವರು ತೀರಿಕೊಂಡ ನಂತರ ಸರ್ವೆ ನಂ. 121/1 ರ ವಿಸ್ತಿರ್ಣ 26 ಗುಂಟೆ ಖಾತೆಯು ಅವರ ಹೆಂಡತಿಯಾದ ರತ್ನಮ್ಮ, ಹನಮಂತಪ್ಪ ಮತ್ತು ರಾಜಣ್ಣ ರವರ ಹೆಸರಿನಲ್ಲಿ ಜಂಟಿ ಖಾತೆ ಬರುತ್ತಿರುತ್ತದೆಂದರೆ ಸರಿ, ವಿಭಾಗ ಪತ್ರ ವಾಗಿಲ್ಲ ಅದು ಯಾವ ರೀತಿ ಬರುತ್ತಿರುತ್ತದೆಂದು ನನಗೆ ಗೊತ್ತಿಲ್ಲ. ಸರ್ವೆ ನಂ. 121/8 ರ ವಿಸ್ತೀರ್ಣ 16 ಗುಂಟೆ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ನನ್ನ ತಾತನಾದ ಚಿಕ್ಕ ಅಯ್ಯಣ ನವರು 05-12-1964 ರಂದು ತೋವಿನಕೆರೆ ಗ್ರಾಮದ ಹನಮಂತಯ್ಯ ಬಿನ್. ಸಂಜೀವಯ್ಯನವರಿಗೆ ಮಾರಾಟ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯಲ್ಲಿ ಹನಮಂತಯ್ಯನ ಮಕ್ಕಳು ಸ್ವಾದೀನದಲ್ಲಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಹನಮಂತಯ್ಯನವರ ಹೆಸರಿಗಾದ ಕ್ರಯ

ಪತ್ರವನ್ನು ನಾನು ಪ್ರಶ್ನೆ ಮಾಡಿರುವುದಿಲ್ಲ.

ತೋವಿನಕೆರೆ, ಕಣವೆ ಹೊಸಹಳ್ಳಿ, ಬಡ ಮುದ್ದಯ್ಯಪಾಳ್ಯ, ಮರೀನಾಯಕನಹಳ್ಳಿ, ಗಟ್ಟಿ ತಿಮ್ಮನಹಳ್ಳಿ, ಮುದಿಗೌಡನಹಳ್ಳಿ ಗ್ರಾಮಗಳಲ್ಲಿ ಸುಮಾರು 250 ಎಕರೆ ಜಮೀನು ನನ್ನ ತಾತನಾದ ಚಿಕ್ಕ ಅಯ್ಯಣನವರ ಹೆಸರಿಗೆ ಇತ್ತು. ನನ್ನ ತಾತನ 5 ಜನ ಅಣ್ಣ ತಮ್ಮಂದಿರು ದಿನಾಂಕ 15-08-1956 ರಲ್ಲಿ ವಿಭಾಗವನ್ನು ಮಾಡಿಕೊಂಡಿರುತ್ತಾರೆಂದರೆ ಸರಿಯಲ್ಲ. ಸದರಿ ವಿಭಾಗದಂತೆ ಅವರ ಹೆಸರಿಗೆ ಬಂದ ಆಸ್ತಿಗಳು ಅವರ ಹೆಸರಿಗೆ ಖಾತೆ ಆಗಿರುತ್ತದೆಂ ದರೆ ಸರಿಯಲ್ಲ. ನಂತರ ಟಿ.ಹೆಚ್. ಹನುಮಂತರಾಯಪ್ಪ ಮತ್ತು ದೊಡ್ಡಣ್ಣ ನವರು 1981 ರ ತನಕ ಅನ್ಯೋನ್ಯವಾಗಿ ಜೊತೆಯಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿಯಲ್ಲ, ಎಲ್ಲರೂ ಒಟ್ಟು ಕುಟುಂಬದಲ್ಲಿ ವಾಸ ಮಾಡುತ್ತಿದ್ದರು. ದಿನಾಂಕೀ 10-01-1974 ರಂದು ನನ್ನ ತಾತನಾದ ಚಿಕ್ಕ ಅಯ್ಯಣನವರು ಕಣವೆ ಹೊಸಹಳ್ಳಿ ಗ್ರಾಮದ ಸರ್ವೆ ನಂ. 66 ವಿಸ್ತೀರ್ಣ 19 ಎಕರೆಯನ್ನು ದಾಸಪ್ಪನ ಮಗ ಬಂಡಿ ರಂಗಪ್ಪನವರಿಗೆ ಮಾರಾಟ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ನನ್ನ ತಾತನಾದ ಚಿಕ್ಕ ಅಯ್ಯಣನವರು ದಿಃ 30-07-1974 ರಂದು ಸರ್ವೆ ನಂ. 60/3 ರ ವಿಸ್ತೀರ್ಣ 4 ಎಕರೆ 17 ಗುಂಟೆ ಪೈಕಿ, 3 ಎಕರೆ 17 ಗುಂಟೆಯನ್ನು ಸಿ. ನರಸಿಂಹಯ್ಯ ಬಿನ್.. ಚಿಕ್ಕ ಅಯ್ಯಣನಿಗೆ ಮಾರಾಟ ಮಾಡಿರುತ್ತಾರೆಂದರೆ ಅವರ ಸ್ವಯಾರ್ಜಿತ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ. ಅದೇ ರೀತಿ ನನ್ನ ತಾತ ಚಿಕ್ಕ ಅಯ್ಯಣ ನವರು ಗಟ್ಟಿ ತಿಮ್ಮನ ಹಳ್ಳಿ ಗ್ರಾಮದ ಸರ್ವೆ ನಂ. 20 ನ್ನು ವೆಂಕಟಪ್ಪನ ಮಗ ಚಿಕ್ಕ ತಿಮ್ಮಯ್ಯನಿಗೆ ಮ ಾರಾಟ ಮಾಡಿರುತ್ತಾರೆಂದರೆ, ಅವರ ಸ್ವಯಾರ್ಜಿತ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ. ಸರ್ವೆ ನಂ. 121 ನನ್ನ ತಾತನ ಸ್ವಯಾರ್ಜಿತ ಆಸ್ತಿ ಆಗಿದ್ದು ಸದರಿ ಆಸ್ತಿಯನ್ನು 1ನೇ ಪ್ರತಿವಾದಿ ಹೆಸರಿಗೆ ದಾನ ಪತ್ರ ಬರೆದುಕೊಟ್ಟಿರುತ್ತಾರೆಂದರೆ ಸರಿಯಲ್ಲ, ಸದರಿ ಪಿತ್ರಾರ್ಜಿತ ಆಸ್ತಿ ಆಗಿದ್ದು ದಿನಾಂಕೀ 04-05-2011 ರಂದು ನಾನು ನನ್ನ ಅಜ್ಜಿ ನರಸಮ್ಮ, ನನ್ನ ತಂದೆ ಹನಮಂತಪ್ಪ, ಚಿಕ್ಕಪ್ಪ ರಾಮಕೃಷ್ಣಪ್ಪ ಹಾಗೂ ಅವರ ಮಕ್ಕಳು ಸೇರಿ ಕಣವೆ ಹೊಸಹಳ್ಳಿ ಗ್ರಾಮದ ಸರ್ವೆ ನಂ. 37 ವಿಸ್ತೀರ್ಣ 20 ಎಕರೆ 28 ಗುಂಟೆ ಪೈಕಿ 8 ಎಕರೆ ಜಮೀನನ್ನು ಮರಿನಾಯಕನಹಳ್ಳಿ ಗ್ರಾಮದ ಸಿದ್ದಪ್ಪ ಬಿನ್. ಹೊನ್ನಕಳಸಪ್ಪ, ರವರಿಗೆ ಮಾರಾಟ ಮಾಡಿರುತ್ತೇವೆಂದರೆ, ಸಾಲ ತಿರುವಳಿಗಾಗಿ ಮಾರಾಟ ಮಾಡಿರುತ್ತೇವೆ. ಸದರಿ ಕ್ರಯ ಪತ್ರದಲ್ಲಿ ಸರ್ವೆ ನಂ. 37 ಪಿತ್ರಾರ್ಜಿತ ಆಸ್ತಿ ಆಗಿದ್ದು ಎಂ.ಆರ್. ಸಂಖ್ಯೆ 3/1988-89 ರಂತೆ ಖಾತೆ ಆಗಿರುತ್ತದೆಂದು ಕಾಣಿಸಲಾಗಿರುತ್ತದೆಂದರೆ ಸರಿ. ಸದರಿ ಕ್ರಯ ಪತ್ರದಲ್ಲಿ ಕಾಣಿಸಿರುವ ವಿಭಾಗ ಪತ್ರ ಆಗಿರುವುದಿಲ್ಲ.

ನನ್ನ ತಾತ ಚಿಕ್ಕ ಅಯ್ಯಣ ವಿದ್ಯಾವಂತರಾಗಿದ್ದರು ಎಂದರೆ ಸರಿ. ನನ್ನ ತಾತ ಗ್ರಾಮದಲ್ಲಿ ಗೌಡಿಕೆ ಮಾಡುತ್ತಿದ್ದರು. ನನ್ನ ತಾತ ಏನೇ ವ್ಯವಹಾರ ಮಾಡಿದರು ಬುದ್ದಿವಂತಿಕೆಯಿಂದ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಾತನ ಭಾಗಕ್ಕೆ ಬಂದ ಆಸ್ತಿಯನ್ನು 1ನೇ ಪ್ರತಿವಾದಿ ಹೆಸರಿಗೆ ದಾನ ಪತ್ರವನ್ನು ಬರೆದುಕೊಟ್ಟಿರುತ್ತಾರೆಂದರೆ ಸರಿಯಲ್ಲ. ಹನಮಂತರಾಯಪ್ಪನವರು ಮರಣ ಹೊಂದಿದ ನಂತರ 7ನೇ ಪ್ರತಿವಾದಿ ಸೆಕ್ರೆಟರಿಯಾಗಿ ಶಾಲೆಯನ್ನು ನಡೆಸಿಕೊಂಡು ಹೋಗುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಹಾಗೂ 7ನೇ ಪ್ರತಿವಾದಿಯ ಮದ್ಯೆ ದಾಯಾದಿ ಮತ್ಸರ ಇರುತ್ತದೆಂದರೆ ಸರಿ. 7ನೇ ಪ್ರತಿವಾದಿ ತಂದೆ ಹೆಸರಿಗೆ ಬಂದ ಆಸ್ತಿಗಳನ್ನು ಅವರು ಮಾರಾಟ ಮಾಡಿದ್ದು ಸದರಿ ಕ್ರಯ ಪತ್ರದ ಆಧಾರದ ಮೇಲೆ ಖಾತೆ ಮಾಡ ಬಾರದೆಂದು ನಾನು ತಾಲ್ಲೂಕು ಕಛೇರಿಯಲ್ಲಿ ಅರ್ಜಿಯನ್ನು ನೀಡಿರುತ್ತೇನೆಂದರೆ ಸರಿ.

ದಾಖಲೆಗಳನ್ನು ಪರಿಶೀಲನೆ ಮಾಡಿ ತಹಶೀಲ್ದಾರವರು ನನ್ನ ಆಕ್ಷೇಪಣೆಯನ್ನು ತಿರಸ್ಕರಿಸಿ ಖಾತೆ ಬದಲಾವಣೆ ಮಾಡಿರುತ್ತಾರೆಂದರೆ ಕ್ರಯ ಪತ್ರದ ಆಧಾರದ ಮೇಲೆ ಖಾತೆ ಮಾಡಿರುತ್ತಾರೆ. ಚಿಕ್ಕ ಅಯ್ಯಣ ಸಹೋದರರು ವಿಭಾಗ ಮಾಡಿಕೊಂಡ ನಂತರ ಅವರ ಭಾಗಕ್ಕೆ ಬಂದ ಆಸ್ತಿಗಳು ಹಾಗೂ ದಾವಾ ಆಸ್ತಿಗಳನ್ನು ಸೇರಿ ಮಾರಾಟ ಮಾಡಿರುತ್ತಾರೆಂದರೆ ಸರಿ. ಆ ರೀತಿ ಮಾರಾಟ ಮಾಡಿದ ಕ್ರಯ ಪತ್ರಗಳನ್ನು ನಾನು ಪ್ರಶ್ನೆ ಮಾಡದೇ 7ನೇ ಪ್ರತಿವಾದಿ ಹೆಸರಿಗೆ ಆದ ಮಾರಾಟವನ್ನು ಮಾತ್ರ ನಾನು ಪ್ರಶ್ನೆ ಮಾಡಿರುತ್ತೇನೆಂದರೆ ಸರಿಯಲ್ಲ. 1956 ರಿಂದ ಚಿಕ್ಕ ಅಯ್ಯಣನ ಸಹೋದರರು ವಿಭಾಗವನ್ನು ಮಾಡಿಕೊಂಡಿದ್ದು ಅಂದಿನಿಂದ ಎಲ್ಲರೂ ಪ್ರತ್ಯೇಕವಾಗಿ ಅನುಭವಿಸುತ್ತಿದ್ದರು ಎಂದರೆ ಸರಿಯಲ್ಲ.

ನಾನು ನಿವೃತ್ತ ಶಿಕ್ಷಕ ಎಂದರೆ ಸರಿ. ನಾನು 7ನೇ ಪ್ರತಿವಾದಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನಾನು ಈ ದಾವೆಯನ್ನು ಬಿಟ್ಟು ಪ್ರತಿವಾದಿಗಳ ವಿರುದ್ದ ಬೇರೆ ದಾವೆಗಳನ್ನು ಸಲ್ಲಿಸಿರುವುದಿಲ್ಲ. 7ನೇ ಪ್ರತಿವಾದಿ ಮತ್ತು ಅವರ ಅಳಿಯ ಸೇರಿ ನನ್ನ ವಿರುದ್ದ ಇದೆ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿರುತ್ತಾರೆ. ನನ್ನ ಹಾಗೂ ಪ್ರತಿವಾದಿ 7 ರವರ ನಡುವೆ ಕ್ರಿಮಿನಲ್ ಪ್ರಕರಣಗಳು ನಡೆಯುತ್ತಿದ್ದವು ಎಂದರೆ ಸರಿ ಅವು ಸುಳ್ಳು ಪ್ರಕರಣವಾಗಿರುತ್ತವೆ. ನನ್ನ ಸಂಬಂಧಿಕರಾದ ರವಿಕುಮಾರವರನ್ನು ಕರೆದುಕೊಂಡು ಬಂದು ನಾನು ವಿಭಾಗಕ್ಕಾಗಿ ಕೊರಟಗೆರೆ ಹಿರಿಯ ಶ್ರೇಣಿಯಲ್ಲಿ ದಾವೆಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಈ ದಾವೆಯನ್ನು ನಾನು ಕಾಲಪರಿಮಿತಿಯಲ್ಲಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಅದಿಕಾರ ಇರುವುದಿಲ್ಲ ಎಂ ದರೆ ಸರಿಯಲ್ಲ. ದಾವಾ ಆಸ್ತಿ ಒಟ್ಟು ಕುಟುಂಬದ ಆಸ್ತಿ ಆಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**Sd/-**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**